ಅನುವಾದಿತ ಕತೆ

ಉರ್ದು ಮೂಲ: **ಇಸ್ಮತ್ ಚುಗ್ತಾಯಿ**
ಇಂಗ್ಲಿಷ್‌ನಿಂದ ಕನ್ನಡಕ್ಕೆ: **ಶೀಲಾ ಪೈ**
ಕಲೆ: ಸಂತೋಷ್ ಸಸಿಹಿತ್ಲು

# ರಜಾಯಿ



ಚಳಿಗಾಲದ ದಿನಗಳಲ್ಲಿ ನಾನು ರಜಾಯಿಯನ್ನು ಹೊದ್ದುಕೊಂಡಾಗ, ಅದು ಗೋಡೆಯ ಮೇಲೆ ಮೂಡಿಸುವ ನೆರಳುಗಳು ಆನೆಯೊಂದು ಹೊಯ್ದಾಡಿದಂತೆಯೇ ಕಾಣಿಸುತ್ತವೆ. ಇದನ್ನು ನೋಡಿದಾಕ್ಷಣ ನನ್ನ ಮನಸ್ಸು ಗತಕಾಲದ ನೆನಪಿನ ಬಲೆಯೊಳಕ್ಕೆ ಓಡುತ್ತದೆ. ನೆನಪುಗಳು ನುಗ್ಗಿ ಬರುತ್ತವೆ.

ಕ್ಷಮಿಸಿ, ನನ್ನ ರಜಾಯಿಯ ಬಗೆಗಿನ ಪ್ರೇಮಕಥೆಯೊಂದನ್ನು ಹೇಳಿ ನಿಮ್ಮನ್ನು ರಂಜಿಸಲು ನಾನು ಬಂದಿಲ್ಲ. ಅದು ಪ್ರಣಯದ ಒಂದು ವಸ್ತುವೂ ಅಲ್ಲ. ಅಷ್ಟೊಂದು ಹಿತಕರವಲ್ಲದ ಕಂಬಳಿ, ರಜಾಯಿಯಂತೆ ಭಯಾನಕವಾಗಿ ನರ್ತಿಸುವ ನೆರಳುಗಳನ್ನು ಗೋಡೆಯ ಮೇಲೆ ಮೂಡಿಸುವುದಿಲ್ಲವೆಂದು ನನಗೆ ಅನಿಸುತ್ತದೆ.

ಆಗ ನಾನೊಬ್ಬಳು ಚಿಕ್ಕ ಹುಡುಗಿ. ಇಡೀ ದಿನ ನನ್ನ ಅಣ್ಣತಮ್ಮಂದಿರು ಮತ್ತು ಅವರ ಗೆಳೆಯರೊಂದಿಗೆ ಜಗಳವಾಡುತ್ತಿದ್ದವಳು. ಆಗಾಗ್ಗೆ ನಾನು ಯಾಕಾದರೂ ಅಷ್ಟೊಂದು ಜಗಳಗಂಟಿಯಾಗಿದ್ದೆ ಎಂದು ಸೋಜಿಗವಾಗುತ್ತದೆ. ನನ್ನ ವಯಸ್ಸಿನಲ್ಲಿ ಉಳಿದ ಅಕ್ಕತಂಗಿಯರು ಆರಾಧಕರನ್ನು ಗಳಿಸಿಕೊಳ್ಳುತ್ತಿದ್ದರೆ, ನಾನು ಸಿಕ್ಕಸಿಕ್ಕ ಹುಡುಗ ಅಥವಾ ಹುಡುಗಿಯರೊಂದಿಗೆ ಜಗಳವಾಡುತ್ತಿದ್ದೆ.

ಹೀಗೆ ಇದ್ದುದರಿಂದಲೇ ಒಂದು ವಾರದ ಮಟ್ಟಿಗೆ ನನ್ನಮ್ಮ ಆಗ್ರಾಕ್ಕೆ ಹೋದಾಗ ಅವಳು ನನ್ನನ್ನು ತನ್ನ ದತ್ತು ತಂಗಿಯೊಬ್ಬಳ ಹತ್ತಿರ ಬಿಟ್ಟು ಹೋದದ್ದು. ಆ ಮನೆಯಲ್ಲಿ ನಾನು ಜಗಳವಾಡಬಹುದಾದಂತಹ ಒಂದು ಇಲಿ ಕೂಡ ಇರಲಿಲ್ಲವೆಂದು ಅವಳಿಗೆ ಗೊತ್ತಿತ್ತು. ನನ್ನ ಪಾಲಿಗೆ ಅದೊಂದು ಘೋರ ಶಿಕ್ಷೆಯಾಗಿತ್ತು. ಅಮ್ಮ ನನ್ನನ್ನು ಬಿಟ್ಟದ್ದು ಬೇಗಮ್ ಜಾನ್‌ಳ ಹತ್ತಿರ. ಯಾರ ರಜಾಯಿ ನನ್ನ ಮನದ ಮೇಲೆ ಕಮ್ಮಾರನ ಕುಲುಮೆಯ ಕಾದ ಕಬ್ಬಿಣದ ಬರೆಯಂತೆ ಅಚ್ಚೊತ್ತಿದೆಯೋ ಅದೇ ಬೇಗಮ್ ಜಾನ್. ಸಜ್ಜನನೆಂದು ಹೆಸರಾದ, ಪ್ರಾಯ ಸಂದ ನವಾಬನೊಡನೆ ಮದುವೆ ಮಾಡಲು ಅವಳ ಬಡ ಹೆತ್ತವರು ಒಪ್ಪಿಕೊಂಡಿದ್ದರು. ಅವನ ಮನೆಯಲ್ಲಿ ಕುಣಿತದ ಹುಡುಗಿಯನ್ನಾಗಲಿ, ವೇಶ್ಯೆಯನ್ನಾಗಲೀ ಯಾರೂ ಯಾವತ್ತೂ ನೋಡಿರಲಿಲ್ಲ. ಹಜ್